ಸಂತೋಷದಿಂದ ಹೇಳುತ್ತಿದ್ದೇವೆ. ನಾವು ಈ ಸಲ ಪ್ರಾರಂಭ ಮಾಡಿದ್ದೇವೆ. ಸರ್ಕಾರಿ ಆಸ್ಪತ್ರೆಯಲ್ಲಿ ಈಗ ಅದಕ್ಕೆ ಚಾಲನೆ ಕೊಟ್ಟಿದ್ದೇವೆ.

ಶ್ರೀ ಅರವಿಂದ ಲಿಂಬಾವಳಿ: ಎಷ್ಟು operations ಆಗಿದೆ?

ಅಧ್ಯಕ್ಷರು: ಆಯಿತು, ಸಾಕು ಬಿಡಿ. ಈಗ ತಡೆಹಿಡಿದ ಪ್ರಶ್ನೆ, ಬೋಪಯ್ಯನವರು ಕೇಳಿ.

ತಡೆಹಿಡಿಯಲಾದ ಪ್ರಶ್ನೆ

50 (29); ಶ್ರೀ ಬೋಪಯ್ಯ ಕೆ. ಜಿ. (ವಿರಾಜಪೇಟೆ)

(ಅ) 2013–14ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಪರಿಶಿಷ್ಟ ಪಂಗಡಗಳ ಮತ್ತು ಪರಿಶಿಷ್ಟ ಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಯಡಿ ಎಷ್ಟು ಅನುದಾನ ಬಿಡುಗಡೆಯಾಗಿದೆ; (ಯೋಜನೆಗಳ ಕಾಮಗಾರಿಗಳ ವಿವರಗಳನ್ನು ತಲ್ಲುಕುವಾರು ನೀಡುವುದು)

(ಆ) ಹಾಗಿದ್ದಲ್ಲಿ, ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; (ಪೂರ್ಣ ವಿವರಗಳನ್ನು ತಾಲ್ಲೂಕುವಾರು ನೀಡುವುದು)

(ಇ) ಪೂರ್ಣಗೊಳ್ಳದ ಕಾಮಗಾರಿಗಳು ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

(ಅ) 2013–14ನೇ ಸಾಲಿನಲ್ಲಿ ಕೊಡುಗೆ ಜಿಲ್ಲೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿಗಾಗಿ ಅನುದಾನವನ್ನು ಈ ಕೆಳಕಂಡ ಯೋಜನೆ / ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

ಕಾರ್ಯಕ್ರಮ /	ಮಂಜೂರಾತಿ (ಪರಿಶಿಷ್ಟ	ಬಿಡುಗಡೆ (ಪರಿಶಿಷ್ಟ	ಮಂಜೂರಾತಿ (ಪರಿಶಿಷ್ಟ	ಬಿಡುಗಡೆ (ಪರಿಶಿಷ್ಟ

ಯೋಜನೆ	ಜಾತಿ)	ಜಾತಿ)	ಪಂಗಡ)	ಪಂಗಡ)
ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ	260.00	192.50	140.00	140.00
ಸಮುದಯ / ಅಂಬೇಡ್ಕರ್ ಭವನ ನಿರ್ಮಾಣ	60.00	18.00	30.00	15.00
ಒಟ್ಟು	**320.00**	**210.50**	**170.00**	**155.00**

ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ಮತ್ತು 2 ರಲ್ಲಿ ನೀಡಲಾಗಿದೆ.

(ಆ) **ಮತ್ತು** (ಇ) ಮೇಲ್ಕಂಡ ಕಾಮಗಾರಿಗಳ ಪೈಕಿ ` 125.00 ಲಕ್ಷಗಳ ಕಾಮ ಗಾರಿಗಳನ್ನು ಮಾನ್ಯ ಶಾಸಕರ ಸಮಿತಿಯಿಂದ ದಿನಾಂಕ: 29.05. 2014ರಂದು ಅನುಮೋದನೆ ದೊರಕಿದ್ದು, ಮುಂದಿನ ಕ್ರಮ ಜರುಗಿಸ ಲಾಗುತ್ತಿದೆ.

ಚುನಾವಣೆ ನೀತಿ ಸಂಹಿತೆ ಇದ್ದುದರಿಂದ 2013–14ನೇ ಸಾಲಿಗೆ ಸಂಬಂಧಿಸಿದಂತೆ ಅನುದಾನ ` 135.00 ಲಕ್ಷಗಳನ್ನು ಕಾಮಗಾರಿಗಳಿಗೆ ದಿನಾಂಕ: 30.04.2014 ರಂದು ಅನುಮೋದನೆ ನೀಡಲಾಗಿದೆ. ದಿನಾಂಕ: 09.06.2014ರಂದು `67.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಈ ಹಂತದಲ್ಲಿ ಯಾವುದೇ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ.

2013–14 ನೇ ಸಾಲಿನ ಗಿರಿಜ ಉಪಯೋಜನೆ ಕ್ರೋಢೀಕರಿಸಿದ ಅನುದಾನದಡಿ ಅನುಷ್ಠಾನಗೊಳಿಸಲಾಗುತ್ತಿರುವ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳ ಪ್ರಗತಿ ವಿವರ.

ಕ್ರ ಸಂ.	ತಾಲ್ಲೂಕು	ಗ್ರಾಮ ಪಂಚಾಯತ್	ಕಾಲೋನಿಯ ಹೆಸರು	ಕಾಮಗಾರಿಯ ವಿವರ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ
1	ಮಡಿಕೇರಿ	ಮದೆನಾಡು	ತಾಳತ್ತಮನೆ	ಸಮುದಾಯ ಭವನ	10.00	5.00
2	ವಿರಾಜಪೇಟೆ	ಕುಟ್ಟ	ನಾಥಂಗಾಲ	–	10.00	5.00
		ಚೆನ್ನಯ್ಯನ ಕೋಟೆ	ಚೆನ್ನಯ್ಯನ ಕೋಟೆ	–	10.00	5.00
	ಒಟ್ಟು				**30.00**	**15.00**

2013–14ನೇ ಸಾಲಿನ ಗಿರಿಜ ಉಪಯೋಜನೆ ಕ್ರೋಢೀಕರಿಸಿದ ಅನುದಾನ ಹಾಗೂ ಭಾರತ ಸಂವಿಧಾನ ಅನುಚ್ಛೇಧ 275 (1) ರಲ್ಲಿ ಅನುಷ್ಠಾನ ಗೊಳಿಸಲಾಗುತ್ತಿರುವ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳ ಪ್ರಗತಿ ವಿವರ.

ಕ್ರ ಸಂ.	ತಾಲ್ಲೂಕು	ಗ್ರಾಮ ಪಂಚಾಯತ್	ಕಾಲೋನಿಯ ಹೆಸರು	ಕಾಮಗಾರಿಯ ವಿವರ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ
1	ಮಡಿಕೇರಿ	ಚೆಂಬು	ಕಟ್ಟಪಳ್ಳಿ	ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ	5.00	5.00
		ಮದೆನಾಡು	ಬೆಟ್ಟತ್ತೂರು ಗ್ರಾಮದ ಬಲೆ ಕಂಡಿ ನೀರುಳ್ಳಿ ಮಲೈ ಕಾಲೋನಿ		25.00	25.00

2	ಸೋಮವಾರ ಪೇಟೆ	ಗುಡ್ಡೆಹೊಸೂರು	ಬಸವನಹಳ್ಳಿ ಮೇದರ ಕಾಲೋನಿ		10.00	10.00
	ಒಟ್ಟು				40.00	40.00

ಅನುಬಂಧ–2

2013–14ನೇ ಸಾಲಿನ ವಿಧಾನ ಸಭಾ ಕ್ಷೇತ್ರವಾರು ಗಿರಿಜನ ಉಪ ಯೋಜನೆ ಕ್ರೋಢೀಕರಿಸಿದ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳ ಪ್ರಗತಿ ವಿವರ.

ಕ್ರ. ಸಂ.	ತಾಲ್ಲೂಕು	ಗ್ರಾಮ ಪಂಚಾಯತ್	ಕಾಲೋನಿಯ ಹೆಸರು	ಕಾಮಗಾರಿಯ ವಿವರ	ಬಿಡುಗಡೆಯಾದ ಅನುದಾನ
1	ಮಡಿಕೇರಿ	ಚೆಂಬು	ಕುದ್ರೆಪಾಯ ಬೈಪೆ ಮಾಪಳ ಕಜೆ	ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ	6.00
		ನರಿಯಂದಡ	ಕೀಮಲೆ ಕಾಡು ಮೇದರ ಕಾಲೋನಿ		6.00
		ಪೆರಾಜೆ	ನಿಡ್ಯಮಲೆ ಮಂಗಳಪಾರೆ		6.00
		ಕುಂಜಿಲ	ನಾಲಡಿ ಮೇಕೆಕೊಪ್ಪಲು (ಅಂಬಲ ಶಾಲೆಯಿಂದ)		6.00
2	ವಿರಾಜಪೇಟೆ	ಟಿ. ಶೆಟ್ಟಿಗೇರಿ	ಬಂಗಂಕೊಲ್ಲಿ		6.00
		ಕಾನೂನು	ವಡ್ಡಮೂಲೆ		6.00
		ಮಾಯಮುಡಿ	ರುದ್ರಬೀಡು ಬೆಳ್ಳಿ ಗಿರಿಜನ ಕಾಲೋನಿ		6.00

		ಬಾಳಲೆ	ದೇವನೂರು ಕೊಡುಬೈಲು		6.00
		ಶ್ರೀಮಂಗಲ	ಕುರ್ಚಿ		6.00
		ಕುಟ್ಟ	ಸಿಂಕೋನ		6.00
3	ಸೋಮವಾರ ಪೇಟೆ	ಗಣಗೂರು	ಗಣಗೂರು ಎಸ್.ಟಿ. ಕಾಲೋನಿ	ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ	10.00
		ನಾಕೂರು ಶಿರಂಗಾಲ	ಹೇರೂರು ಎಸ್.ಟಿ. ಕಾಲೋನಿ		10.00
		ಕೊಡಗರಹಳ್ಳಿ	ಕಲ್ಲೂರು ಎಸ್.ಟಿ. ಕಾಲೋನಿ		10.00
		ನಂಜರಾಯಪಟ್ಟಣ	ನಂಜರಾಯಪಟ್ಟಣ ಎಸ್. ಟಿ. ಕಾಲೋನಿ		10.00
			ಒಟ್ಟು		100.00

2013–14ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಮೂಲ ಭೂತ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಭವನಗಳ ನಿರ್ಮಾಣ ಯೋಜನೆಗಳಡಿ ಕೊಡುಗೆ ಜಿಲ್ಲೆಗೆ ಮಂಜೂರು ಮಾಡಲಾಗಿರುವ ತಾಲ್ಲೂಕು ವಾರು ಕಾಮಗಾರಿಗಳ ವಿವರ.

ಕ್ರ ಸಂ.	ತಾಲ್ಲೂಕು / ವಿಧಾನ ಸಭಾ ಕ್ಷೇತ್ರ	ಗ್ರಾಮ / ಸ್ಥಳದ ಹೆಸರು (ಪರಿಶಿಷ್ಟ ಜಾತಿ ಕಾಲೋನಿ)	ಕಾಮಗಾರಿ ವಿವರ	ಮಂಜೂರಾತಿ ನೀಡಿದ ಮೊತ್ತ	ಮೊದಲ ಕಂತಾಗಿ ಬಿಡುಗಡೆ ಮಾಡಿದ ಮೊತ್ತ

	ಕೊಡಗು ಜಿಲ್ಲೆ				
1	ಮಡಿಕೇರಿ	ಕಡಗದಾಳು ಗ್ರಾ.ಪಂ. ನೀರುಕೊಲ್ಲಿ	ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ	5.00	2.50
2		ಕಡಗದಾಳು ಗ್ರಾ.ಪಂ. ನೀರುಕೊಲ್ಲಿ		5.00	2.50
3		ಕಡಗದಾಳು ಗ್ರಾ.ಪಂ. ನೀರುಕೊಲ್ಲಿ		5.00	2.50
4		ಕಡಗದಾಳು ಗ್ರಾ.ಪಂ. ಚೌಡಮ್ಮ ಕಾಲೋನಿ		5.00	2.50
5		ಕಡಗದಾಳು ಗ್ರಾ.ಪಂ. ಚೌಡಮ್ಮ ಕಾಲೋನಿ		5.00	2.50
6		ಕಡಗದಾಳು ಗ್ರಾ.ಪಂ. ಕತ್ತಲೆಕಾಡು ಪೈಸಾರಿ ಕಾಲೋನಿ		5.00	2.50
7		ಮೂರ್ನಾಡು ಗ್ರಾ.ಪಂ. ಕಾಂತೂರು ಭಗವತಿ ಕಾಲೋನಿ		5.00	2.50
8		ಮೂರ್ನಾಡು ಗ್ರಾ.ಪಂ ಕಾಂತೂರು ಕಾಟಗೇರಿ ಭಗವತಿ ಕಾಲೋನಿ		5.00	2.50
9		ಮೂರ್ನಾಡು ಗ್ರಾ. ಪಂ. ಐಕೊಳ ಅಯ್ಯಪ್ಪ ಕಾಲೋನಿ		5.00	2.50
10		ಮೂರ್ನಾಡು ಗ್ರಾ. ಪಂ. ಗಾಂಧಿನಗರ ಹರಿಜನ ಕಾಲೋನಿ		5.00	2.50
11		ಮೂರ್ನಾಡು ಗ್ರಾ. ಪಂ. ಗಾಂಧಿನಗರ		5.00	2.50

		ಹರಿಜನ ಕಾಲೋನಿ			
12		ಮೂರ್ನಾಡು ಗ್ರಾ. ಪಂ. ಮುತ್ತಾರುಮುಡಿ ಹರಿಜನ ಕಾಲೋನಿ		5.00	2.50
13		ಮೂರ್ನಾಡು ಗ್ರಾ. ಪಂ. ಬಾಡಗ ಹರಿಜನ ಕಾಲೋನಿ		5.00	2.50
14		ಮೂರ್ನಾಡು ಗ್ರಾ. ಪಂ. ಬಾಡಗ ಜಯಂತಿ ಕಾಲೋನಿ		5.00	2.50
15		ಮೂರ್ನಾಡು ಗ್ರಾ. ಪಂ. ಗಾಂಧಿನಗರ ಹರಿಜನ ಕಾಲೋನಿ		5.00	2.50
16		ಮೂರ್ನಾಡು ಗ್ರಾ. ಪಂ. ಬಾಡಗ ಹರಿಜನ ಕಾಲೋನಿ		5.00	2.50
17		ಗಾಳಿಬೀಡು ಗ್ರಾ. ಪಂ. ವಣಚಲು ನವಗ್ರಾಮ ಪ. ಜಾತಿ ಕಾಲೋನಿ	ಕುಡಿಯರ ಮುತ್ತಮ್ಮನವರ ಮನೆಯಿಂದ ಸಿ.ಸಿ.ರಸ್ತೆ ನಿರ್ಮಾಣ	5.00	2.50
18		ಗಾಳಿಬೀಡು ಗ್ರಾ. ಪಂ. 2ನೇ ಮೊಣ್ಣಂಗೇರಿ	ಚಂದಪ್ಪ ಮನೆಯಿಂದ ಸಿ.ಸಿ. ರಸ್ತೆ ನಿರ್ಮಾಣ	5.00	2.50
19		ಗಾಳಿಬೀಡು ಗ್ರಾ. ಪಂ. ಕೌವಟ್ಟು ಕಾಲೋನಿ	ಸಿ. ಸಿ. ರಸ್ತೆ. ಮತ್ತು ಚರಂಡಿ ನಿರ್ಮಾಣ	5.00	2.50
20		ಬೇಟ್ಟಗೇರಿ ಗ್ರಾ.ಪಂ. ಕಾರಗುಂದ		5.00	2.50

		ಅಜ್ಜೇಟಿರ ಮತ್ತು 2ನೇ ಪ.ಜಾತಿ ಕಾಲೋನಿ			
21		ಬೇಟ್ಟಗೇರಿ ಗ್ರಾ.ಪಂ. ಅರವತ್ತೊಕ್ಲು ಕಡಸೂರು ಬೈಸಾರಿ ಕಾಲೋನಿ		5.00	2.50
22		ಬೇಟ್ಟಗೇರಿ ಗ್ರಾ. ಪಂ. ಪಾಲೂರು ದೇವರಕಾಡು ಪೈಸಾರಿ ಮತ್ತು ನೇಪಾಡಂಡ ಕಾಲೋನಿ		5.00	2.50
23		ಬೇಟ್ಟಗೇರಿ ಗ್ರಾ. ಪಂ. ಹೆರವನಾಡು ಪನ್ಯ ಹ. ಕಾಲೋನಿ		5.00	2.50
24		ಬಲ್ಲಮಾವಟಿ ಗ್ರಾ.ಪಂ. ರಾಟೇ ದೇವಸ್ಥಾನದಿಂದ ಮುಂಜಾಟು ಪ.ಜಾತಿ ಕಾಲೋನಿಗೆ		5.00	2.50
25		ಬಲ್ಲಮಾವಟಿ ಗ್ರಾ. ಪಂ. ಪುಂದೇಟು ಪ. ಜಾತಿ ಕಾಲೋನಿ		5.00	2.50
26		ಬಲ್ಲಮಾವಟಿ ಗ್ರಾ. ಪಂ. ನೆಲಜಿ ಮೇದರ ಕಾಲೋನಿ		5.00	2.50
27		ಬಲ್ಲಮಾವಟಿ ಗ್ರಾ. ಪಂ. ದೊಡ್ಡಪುಲಿಕೋಟು ಕೊಡಿಯಂಡ ಪ. ಜಾತಿ ಕಾಲೋನಿ		5.00	2.50

28		ಮರಗೋಡು ಪರಿಶಿಷ್ಟ ಜಾತಿ ಕಾಲೋನಿ	ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ	10.00	10.00
29		ಮೂರ್ನಾಡು ಪರಿಶಿಷ್ಟ ಜಾತಿ ಕಾಲೋನಿ		10.00	10.00
30		ತೊರೆನೂರು ಪರಿಶಿಷ್ಟ ಜಾತಿ ಕಾಲೋನಿ		10.00	10.00
31		ನಲ್ಲೂರು ಪರಿಶಿಷ್ಟ ಜಾತಿ ಕಾಲೋನಿ		10.00	10.00
32		ಕೂಡ್ಲೂಡು ಪರಿಶಿಷ್ಟ ಜಾತಿ ಕಾಲೋನಿ		10.00	10.00
33		ಮುಳ್ಳೂರು ಪರಿಶಿಷ್ಟ ಜಾತಿ ಕಾಲೋನಿ		10.00	10.00
34		ಮಾದಾಪುರ ಪರಿಶಿಷ್ಟ ಜಾತಿ ಕಾಲೋನಿ		15.00	15.00

ಶ್ರೀ ಕೆ. ಜಿ. ಬೋಪಯ್ಯ: ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಬಾರಿ ಅವರು ಕೊಟ್ಟಿರುವ ಉತ್ತರ ಸರಿಯಿಲ್ಲವೆಂದು ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿತ್ತು. ಆದರೆ, ಪುನಃ ಅದೇ ಉತ್ತರವನ್ನು ಕಳುಹಿಸಿದ್ದಾರೆ.

ಅಧ್ಯಕ್ಷರು: ಹೌದಾ?

ಶ್ರಿ ಕೆ. ಜಿ. ಬೋಪಯ್ಯ: ಹೌದು, ಮತ್ತೆ ಅದೇ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ನೀವು ಏನು ಪ್ರಶ್ನೆಯನ್ನು ಕೇಳಿದ್ದೀರಿ?

ಶ್ರೀ ಕೆ. ಜಿ. ಬೋಪಯ್ಯ: 2013–14ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಪರಿಶಿಷ್ಟ ಪಂಗಡಗಳ ಮತ್ತು ಪರಿಶಿಷ್ಟ ಜಾತಿಗಳ ಸಮಗ್ರ ಅಭಿವೃದ್ಧಿಗಾಗಿ

ಯಾವ ಯಾವ ಯೋಜನೆಯಡಿ ಎಷ್ಟು ಅನುದಾನ ಬಿಡುಗಡೆಯಾಗಿದೆ? ಯೋಜನೆಗಳ ಕಾಮಗಾರಿಗಳ ವಿವರಗಳನ್ನು ತಾಲ್ಲೂಕುವಾರು ನೀಡುವುದು ಎಂದು ಪ್ರಶ್ನೆ ಕೇಳಿದ್ದೆ. ಆದರೆ ಇವರು ಸಮುದಾಯ ಭವನ ಮತ್ತು ಕಾಂಕ್ರೀಟ್ ರಸ್ತೆ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ.

ಅಧ್ಯಕ್ಷರು: ನೀವು ಏನು ಕೇಳಿರುವುದಕ್ಕೆ ಸಂಬಂಧಪಟ್ಟಂತೆ ಅವರು ಉತ್ತರ ಕೊಟ್ಟಿದ್ದಾರೆ?

ಶ್ರೀ ಕೆ. ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಈ ಯೋಜನೆಗಳಲ್ಲದೆ ಬೇರೆ ಯೋಜನೆಗಳಾದ ಮನೆಗಳು ಮತ್ತು ಇತರೇ ಯೋಜನೆಗಳಿವೆ.

ಅಧ್ಯಕ್ಷರು: ಅವು ಇರಬಹುದು. ಆದರೆ, ಅವರು ಕೊಟ್ಟಿರುವುದನ್ನು ಹೇಳಿದ್ದಾರೆ.

ಶ್ರೀ ಕೆ. ಜಿ. ಬೋಪಯ್ಯ: ಹಾಗಾದರೆ, ಮನೆಗಳನ್ನು ಕೊಟ್ಟಿಲ್ಲವೇ? ಇದಕ್ಕೆ ಅವರು ಉತ್ತರ ಹೇಳಲಿ. ಈ ತರಹ ಉತ್ತರ ಕೊಡುವುದು ಸರಿಯಲ್ಲ. ಗಿರಿಜನರಿಗೆ ಮನೆಗಳು ಮತ್ತು ಕುಡಿಯುವ ನೀರನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ಬೇರೆ ಬೇರೆ ಯೋಜನೆಗಳಲ್ಲಿ ಇವುಗಳನ್ನು ಕೊಟ್ಟಿರುತ್ತಾರೆ.

ಶ್ರೀ ಕೆ. ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಸಮಗ್ರವಾದ ಮಾಹಿತಿ ಕೊಡಬೇಕೆಂದು ಹೇಳಿದ್ದೇನೆ. ಆದರೆ, ಮತ್ತೆ ಅದೇ ಉತ್ತರವನ್ನು ಕೊಟ್ಟರೆ ಹೇಗೆ?

ಅಧ್ಯಕ್ಷರು: ಹಾಗಾದರೆ, ಉತ್ತರ ಹೇಳಿ?

ಶ್ರೀ ಕೆ. ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, 2013–14ನೇ ಸಾಲಿನದು ಬಿಟ್ಟು ಬಿಟ್ಟಿದ್ದಾರೆ. ಇದು ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅಧಿಕಾರಿಗಳು ಅಲ್ಲಿಂದ ಏನು ಮಾಹಿತಿಯನ್ನು ಕಳುಹಿಸುತ್ತಾರೆಯೋ ಅದನ್ನು ಇಲ್ಲಿಗೆ ತಂದು ಕೊಡುವುದು ಸರಿಯಲ್ಲ. ಈ ರೀತಿಯಾಗಿ ನಿಮಗೆ ತಪ್ಪಾ ಮಾಹಿತಿಯನ್ನು ಕೊಟ್ಟಿರುವಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈಗ ಕೊಟ್ಟಿರುವ ಉತ್ತರ ಸರಿಯಲ್ಲ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿಯವರಿಗೆ ನೀಡಿರುವಂಥ ಮಾಹಿತಿಯನ್ನು ಕೊಟ್ಟಿದ್ದಾರೆ. ಪರಿಶಿಷ್ಟ ಪಂಗಡದವರಿಗೆ ಕೊಟ್ಟಿರುವ ಮಾಹಿತಿಯನ್ನು ನೀಡಿರುವಂತೆ ಕಾಣುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಗಿರಿಜನರಿಗೆ ಏನೇನು ಕೊಟ್ಟಿದ್ದಾರೆಂಬ ಬಗ್ಗೆ ನಾನು ಮತ್ತೊಮ್ಮೆ ವಿಚಾರ ಮಾಡಿ ಆ ಬಗ್ಗೆ ಮತ್ತೆ ಮಾಹಿತಿ ಕೊಡುವಂಥ ಕೆಲಸ ಮಾಡುತ್ತೇನೆ. ತಪ್ಪು ಮಾಹಿತಿ ನೀಡಿದ್ದರೆ ಸಂಬಂಧಪಟ್ಟವರ ಮೇಲೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಜಿ. ಬೋಪಯ್ಯ: ತಪ್ಪು ಮಾಹಿತಿ ನೀಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸದನಕ್ಕೆ ಈ ರೀತಿಯಾಗಿ ತಪ್ಪು ಮಾಹಿತಿ ಕೊಡುವುದು ಸರಿಯಲ್ಲ. ನಾನು 2013–14ನೇ ಸಾಲಿನ ಮಾಹಿತಿ ಕೇಳಿದ್ದೇನೆ. ಆದರೆ, ಅವರು 2014–15ನೇ ಸಾಲಿನ ಮಾಹಿತಿ ಕೊಟ್ಟು, ಚುನಾವಣೆ ಇದ್ದ ಪ್ರಯಕ್ತ ಯಾವುದೇ ಕೆಲಸ ಆಗಿಲ್ಲವೆಂದು ಮಾಹಿತಿ ಕೊಟ್ಟಿದ್ದಾರೆ. ಆದ್ದರಿಂದ, ಈ ರೀತಿಯಾಗಿ ತಪ್ಪು ಮಾಹಿತಿ ಕೊಟ್ಟಿರುವ ಅಧಿಕಾರಿಗಳನ್ನು ಬಿಟ್ಟರೆ ಈ ಇಲಾಖೆಗೆ ಒಳ್ಳೆಯ ಹೆಸರು ಬರುವುದಿಲ್ಲ ಹಾಗೆಯೇ ಉದ್ಧಾರ ಕೂಡ ಆಗುವುದಿಲ್ಲ. ಅವರಿಗೆ ಯಾವುದೇ ಕಳಕಳಿ ಇಲ್ಲ. ಆದ್ದರಿಂದ, ಈ ಬಗ್ಗೆ ದಯವಿಟ್ಟು ಗಂಭೀರವಾಗಿ ತೆಗೆದುಕೊಳ್ಳಿ.

ಶ್ರೀ ಹೆಚ್. ಆಂಜನೇಯ: ಆಗಲಿ Sir, Thank you.

ಅಧ್ಯಕ್ಷರು: ಪ್ರಶ್ನೋತ್ತರ ಮುಕ್ತಾಯವಾಗಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಮೊನ್ನೆದಿವಸ ಶೂನ್ಯವೇಳೆಯಲ್ಲಿ ಬಿಸಿಎಂಸಿ ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳಲ್ಲಿನ ವಿದ್ಯಾರ್ಥಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಈ ಬಗ್ಗೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು: ಆನಂತರ ತೆಗೆದುಕೊಳ್ಳುತ್ತೇನೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಇ) **ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು**

ಶ್ರೀ ಆರ್. ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 03.07.2014ರ ಒಂಬತ್ತನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 136 ಪ್ರಶ್ನೆಗಳ ಪೈಕಿ 124 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–1)

6. ಪ್ರಕಟಣೆ

ವಿಷಯ: ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಬಿಡುಗಡೆ ಸಮಾರಂಭ

ಅಧ್ಯಕ್ಷರು: ದಿನಾಂಕ: 03.07.2014ರಂದು ಅಂದರೆ, ಈ ದಿನ ಸಂಜೆ 5.30 ಗಂಟೆಗೆ ವಿಕಾಸ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಬಿಡುಗಡೆ ಸಮಾರಂಭ ಕಾರ್ಯಕ್ರಮ ಆಯೋಜಿಸಲಾಗಿರುತ್ತದೆ. ಸದರಿ ಸಮಾರಂಭದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಪಾಲ್ಗೊಳ್ಳಬೇಕೆಂದು ಈ ಮೂಲಕ ನಾನು ವಿನಂತಿಸಿ ಕೊಳ್ಳುತ್ತೇನೆ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಬಿಸಿಎಂ ಹಾಸ್ಟೇಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮರು ಅವಕಾಶ ಕಲ್ಪಿಸುವ ಬಗ್ಗೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಮಡಿಕೇರಿ): ಮಾನ್ಯ ಅಧ್ಯಕ್ಷರೆ, ಬಿಸಿಎಂ ಹಾಸ್ಟೆಲ್‌ಗಳಲ್ಲಿದ್ದುಕೊಂಡು ಮೊದಲನೇ ವರ್ಷದ ಡಿಗ್ರಿಯಲ್ಲಿ ಓದುತ್ತಿರುವಾಗ ಅವರೇನಾದರೂ ಮೊದಲ ವರ್ಷದ ಡಿಗ್ರಿಯಲ್ಲಿ ಎರಡು subject ಗಳಲ್ಲಿ ಫೇಲ್ ಆದರೆ ಅವರು ಎರಡನೇ ವರ್ಷ ಅಲ್ಲಿರುವುದಕ್ಕೆ ಅವಕಾಶ